International Journal of Kannada Research
www.kannadajournal.com

ISSN: 2454–5813
IJKR 2019; 5(4): 03-05
© 2019 IJKR
www.kannadajournal.com
Received: 04-08-2019
Accepted: 06-09-2019

ಶ್ರೀರಾಮ .ಎಂ
ಸಹಾಯಕ ಪ್ರಾಧ್ಯಾಪಕರು,
ಬಿ.ಬಿ.ಎಂ, ವಿಭಾಗ,
ನ್ಯೂಹಾರಿಜನ್ ಕಾಲೇಜು,
ಮಾರತ್ತಹಳ್ಳಿ ರಿಂಗ್ ರೋಡ್,
ಬೆಂಗಳೂರು

Corresponding Author:
ಶ್ರೀರಾಮ .ಎಂ
ಸಹಾಯಕ ಪ್ರಾಧ್ಯಾಪಕರು,
ಬಿ.ಬಿ.ಎಂ, ವಿಭಾಗ,
ನ್ಯೂಹಾರಿಜನ್ ಕಾಲೇಜು,
ಮಾರತ್ತಹಳ್ಳಿ ರಿಂಗ್ ರೋಡ್,
ಬೆಂಗಳೂರು

# ಹರಿಹರನ 'ನಂಬಿಯಣ್ಣನ ರಗಳೆ'ಯಲ್ಲಿ ಮೂಡಿಬಂದಿರುವ ಶಿವನ ನಟನೆ

**ಶ್ರೀರಾಮ .ಎಂ**

ಕ್ರಿ.ಶ. ಹನ್ನೆರಡು-ದದಿಮೂರನೆಯ ಶತಮಾನಗಳಲ್ಲಿ ಜೀವಿಸಿದ್ದ ಹರಿಹರ ಮಹಾಕವಿಯು ರಚಿಸಿರುವ 'ನಂಬಿಯಣ್ಣನ ರಗಳೆ' ಒಂದು ಉತ್ತಮ ಕಥಾ ಪ್ರಂಗವನ್ನು ಒಳಗೊಂಡಿದೆ. ಇತರ ರಗಳೆಗಳಲ್ಲಿ ಭಕ್ತನು ಶಿವನ ಸಾಕ್ಷಾತ್ಕಾರಕ್ಕಾಗಿ ನಾನಾ ಬಗೆಯ ಪಾಡು ಪಡುವುದಾದರೆ ಈ ನಂಬಿಯಣ್ಣನ ರಗಳೆಯಲ್ಲಿ ಸುಖವಾಗಿದ್ದ ನಂಬಿಯಣ್ಣನ ಮದುವೆಯ ಮಂ ಟಪಕ್ಕೆ ಶಿವನು ವೃದ್ಧ ಮಾಹೇಶ್ವರನಾಗಿ ತೆರಳಿ ಅವನ ಮದುವೆಯನ್ನು ತಪ್ಪಿಸಿ, ನಂಬಿಯಣ್ಣನನ್ನು ತನ್ನ ತೊತ್ತನ್ನಾಗಿ ಮಾಡಿಕೊಳ್ಳುವುವುದಾಗಿ ಹೇಳಿ ನಂಬಿಯಣ್ಣನನ್ನು ಚಿಂತಾಸಮುದ್ರದಲ್ಲಿ ಮುಳಗಿಸಿ ತನ್ನ ಮಹಿಮಾತಿಶಯಗಳನ್ನು ಪ್ರ ಕಟಿಸಿ ಸ್ವಸ್ವರೂಪವನ್ನು ತೋರಿ ನಂಬಿಯಣ್ಣನನ್ನು ಉದ್ಧರಿಸಿದ ಪ್ರಸಂಗವಿದೆ. ನಂಬಿಯಣ್ಣನನ್ನು ಗೋಳುಹುಯ್ದುಕೊ ಳ್ಳುವುದರಲ್ಲಿಯೇ ಶಿವನ ನಟನೆ ವ್ಯಕ್ತವಾಗಿದೆ. ನಂಬಿಯಣ್ಣನ ಮದುವೆಗೆ ಅಡ್ಡಿಪಡಿಸಿದ ವೃದ್ಧ ಮಾಹೇಶ್ವರನು "ನಂಬಿ ಯು ನನ್ನ ತೊತ್ತಿನ ಮಗ; ಆದ್ದರಿಂದ ನನ್ನ ತೊತ್ತು. ನನ್ನ ಅನುಮತಿಯಿಲ್ಲದೆ ವಿವಾಹವಾಗುವಂತಿಲ್ಲ; ಇದಕ್ಕೆ ಸಾಕ್ಷಿ ಯಾಗಿ ಪತ್ರವಿದೆ, ಸಾಕ್ಷಿಯ ಜನ ತಿರುವಣ್ಣನಲ್ಲೂರಿನಲ್ಲಿದ್ದಾರೆ" ಎಂದನಿಮಿತ್ತ ನಂಬಿಯಣ್ಣನು ವೃದ್ಧ ಮಾಹೇಶ್ವರನೊ ಡನೆ ತಿರುವಣ್ಣನಲ್ಲೂರಿಗೆ ಹೋಗಬೇಕಾಯಿತು. ಶಿವನು ಪ್ರಮಾಣಪತ್ರವನ್ನೂ, ಸಾಕ್ಷಿಗಳನ್ನೂ ಸೃಷ್ಟಿಸುವುದರ ಮೂಲ ಕ ನಂಬಿಯಣ್ಣನ ಬೈಗಳನ್ನು ಅನ್ಯಥಾ ಭಾವಿಸದೆ ಅವನ ಬೈಗುಳವೇ ಹೊಗಳಿಕೆ ಎಂದು ಭಾವಿಸುತ್ತಾನೆ.

ನಂಬಿಯಣ್ಣನನ್ನು ವೃದ್ಧ ಮಾಹೇಶ್ವರನು ತಿರುವಣ್ಣನಲ್ಲೂರಿಗೆ ಕರೆದೊಯ್ಯುತ್ತಿರುವಾಗ ನಂಬಿಯಣ್ಣನ ದೇಹದ ಬಲ ಭುಜ, ಬಲದ ತೋಳು, ಬಲಗಣ್ಣಿನ ಹುಬ್ಬು ಅದುರಲಾರಂಭಿಸಿದವು. ಇವೆಲ್ಲವೂ ಶುಭ ಶಕುನಗಳೆನಿಸಿ ತಾನು ವೃದ್ಧ ನ ತೊತ್ತಾಗುವ ಪ್ರಸಂಗ ತಪ್ಪಬಹುದೆಂಬ ಆಸೆ ಉಂಟಾಯಿತಾದರೂ ಮದುವೆಯನ್ನೇ ನಿಲ್ಲಿಸಿದ ನಿಮಿತ್ತ ನಂಬಿಯ ಣ್ಣ ಅಪಾರ ಚಿಂತಾಕ್ರಾಂತನಾಗಿದ್ದನು. ನಂಬಿಯಣ್ಣನು ತನ್ನ ಪರಿವಾರದೊಡನೆ ತಿರುವಣ್ಣನಲ್ಲೂರಿಗೆ ಬಂದಾಗ ಊ ರಿನ ಹೊರಹೊಲಯದ ಮಂಟಪದಲ್ಲಿಯೇ ಈ ರಾಜಕುಮಾರನನ್ನು ಜನ ಭೇಟಿಮಾಡಿ ಆಗಮನಕ್ಕೆ ಕಾರಣವನ್ನು ಕೇ ಳಿದರು, ನಂಬಿಯಣ್ಣನನ್ನು ವೃದ್ಧ ಮಾಹೇಶ್ವರನು ಪ್ರಮಾಣ ಪತ್ರವನ್ನು ತೋರಿಸಿ, ತಾನು ಅವನ ತೊತ್ತಿನ ಮಗನೆಂ ದೂ, ಇದಕ್ಕೆ ತಿರುವಣ್ಣನಲ್ಲೂರಿನಲ್ಲಿ ಸಾಕ್ಷಿಯಾಗಿ ಜನರುಂಟೆಂದೂ ಹೇಳಿ ಕರೆತಂದಿರುವ ಸಂಗತಿಯನ್ನು

ಹೇಳಿದನು. ಊರಿನ ಜನ ತಮಗೆ ವೃದ್ಧನ ಪರಿಚಯವಿಲ್ಲವೆಂದೂ, ರಾಜಕುಮಾರನಾದ ನಂಬಿಯಣ್ಣನು ತೊತ್ತಿನ ಮಗ ಎಂಬ ಸಂ ಗತಿಯನ್ನು ತಾವು ಎಂದೂ ಕೇಳಿಲ್ಲವೆಂದೂ ಹೇಳಿದರು.

ವೃದ್ಧ ಮಾಹೇಶ್ವರ ಹಾಗೂ ನಂಬಿಯಣ್ಣರಿದ್ದ ಮಂಟಪಕ್ಕೆ ಊರಿನ ಜನರೆಲ್ಲ ಈ ಕೌತುಕದ ಸಂಗತಿ ಯಾವ ರೀತಿ ಕೊ ನೆಯಾಗುವುದೆಂದು ತಿಳಿಯಲು ಧಾವಿಸಿದರು. ಆ ಹೊತ್ತಿಗೆ ಮುದುಕ ಶಿವಭಕ್ತರಲ್ಲಿ ಕೆಲವರ ಹೆಸರನ್ನು ಹಿಡಿದು ವೃದ್ಧ ಮಾಹೇಶ್ವರ ಕೂಗುತ್ತಾ "ಕುಶಲವೇ? ಕ್ಷೇಮವೇ?" ಎಂದು ವಿಚಾರಿಸಿದನು. ಆ ಜನರು ವೃದ್ಧ ಮಾಹೇಶ್ವರನು ತಮಗೆ ಚಿರಪರಿಚಿತರೆಂಬಂತೆ ವೃದ್ಧ ಮಾಹೇಶ್ವರನೊಡನೆ ಮಾತನಾಡಲಾರಂಭಿಸಿದರು. ರುದ್ರಭಟ್ಟರು, ಪಶುಪತಿ ಭಟ್ಟರು, ಈಶಾನಭಟ್ಟರು, ಸಹಸ್ರವೇದಿಗಳನ್ನು ವೃದ್ಧ ಮಾಹೇಶ್ವರ ಮಾತನಾಡಿಸಿದಾಗ ಊರಿನ ಜನರಿಗೆ ಅವರು ಯಾವಾಗಿ ನಿಂದ ತಮ್ಮ ಊರಿನಲ್ಲಿರುವರೆಂಬ ಸಂಗತಿ ತಿಳಿಯಲಿಲ್ಲ. ಊರಿನ ಜನ-ನಂಬಿಯಣ್ಣನ ಪರವಾಗಿದ್ದವರು ಈ ಜನರ ಕುಲ, ವಾಸಸ್ಥಳ ಇತ್ಯಾದಿಗಳನ್ನು ಕೇಳಿದಾಗ ಊರಿನ ಚಿರಪರಿಚಿತ ಸ್ಥಳಗಳ ಹೆಸರುಗಳನ್ನು ಹೇಳಿ ದಿಗ್ಭ್ರಮೆಯನ್ನುಂ ಟುಮಾಡಿದರು. ವಾಸ್ತವಾಗಿ ಇವರೆಲ್ಲ ಶಿವನೇ ಕೈಲಾಸದಿಂದ ನಾಟಕವನ್ನಾಡಿಸಲು ಕರೆತಂದ ಗಣಧರರಾಗಿದ್ದರು.

ನಂಬಿಯಣ್ಣನಿಗೆ ವೃದ್ಧ ಮಾಹೇಶ್ವರನು ಅನೇಕ ಪರಿಚಿತ ವ್ಯಕ್ತಿಗಳನ್ನು ಊರಿನಲ್ಲಿ ಹೊಂದಿರುವ ಸಂಗತಿಯನ್ನರಿತು ತಾನು ತೊತ್ತಾಗಬೇಕೆನಿಸಿ ಅತಿಶಯವಾದ ಕೋಪವನ್ನು ತಾಳಿದನು. 'ಶಿವನಿಗೆ ಚೆಲಾಟ, ನಂಬಿಗೆ ಪ್ರಾಣಸಂಕಟ ವಾಗುತ್ತಿದ್ದ ಆ ಸಂದರ್ಭದಲ್ಲಿ ಶಿವನು ನಂಬಿಯಣ್ಣನ ಸ್ಥಿತಿಯನ್ನು ನೋಡಿ ಮನಸ್ಸಿನಲ್ಲಿ ನಗುತ್ತಿದ್ದನು.

ವೃದ್ಧ ಮಾಹೇಶ್ವರನು ಕೊಟ್ಟ ಪ್ರಮಾಣ ಪತ್ರವನ್ನು ಗಣಕನು ಮೂಲಕನ ಮೂಲಕ ಓದಿಸಿದಾಗ ಅಲ್ಲಿ ದಾಖಲಿಸಿದ್ದ ಸಾಕ್ಷಿಯ ವ್ಯಕ್ತಿಗಳು ಸಭೆಯಲ್ಲಿ ಎದ್ದು ನಿಂತು ತಾವೇ ಸಾಕ್ಷಿದಾರರೆಂದು ಘೋಷಿಸಿದರು. ಆಗ ನಂಬಿಯಣ್ಣನಿಗೆ ತ ನ್ನ ಉಳಿದ ಜೀವಮಾನವೆಲ್ಲ ತೊತ್ತಾಗಿ ಕಳೆಯಬೇಕೆನಿಸಿ ಸಹಿಸಲಸಾಧ್ಯವಾದ ಕೋಪ ಉಂಟಾಯಿತು. ನಂಬಿಯ ಣ್ಣನು ಹೇಗಾದರೂ ಮಾಡಿ ರಾಜಕುಮಾರನಾಗಿಯೇ ಮುಂದುವರಿಯಬೇಕೆಂದು ನಿರ್ಧರಿಸಿ ಗಣಕನ ಕೈಯಲ್ಲಿದ್ದ ಪ್ರಮಾಣಪತ್ರವನ್ನು ಕಿತ್ತುಕೊಂಡು ಚೂರುಚೂರಾಗಿ ಹರಿದು ತೊತ್ತಿನ ಸ್ಥಾನ ತನಗೆ ಬರುವಂತಿಲ್ಲವೆಂದು ಬೀಗಿದನು.

ಆದರೆ ದೇವರ ಮುಂದೆ ಮನುಷ್ಯನ ಆಟ ನಡೆಯುವುದೆ? ವೃದ್ಧ ಮಾಹೇಶ್ವರನು ಗಹಗಹಿಸಿ ನಗುತ್ತಾ "ನೀನು ಹರಿದು ಹಾಕಿದ್ದು ಪಡಿಪತ್ರ; ಮೂಲ ಪತ್ರವು ಶಿವಾಲಯದಲ್ಲಿ ಬೇರೆ ಉಂಟು; ನನ್ನ ಹೆಂಡತಿ ಹೀಗಾಗಬಹುದೆಂದು ಹೇಲಿದ್ದ ರಿಂದ ನಿನ್ನ ಬಳಿಗೆ ಪ್ರತಿಪತ್ರವನ್ನು ತಂದಿದ್ದೆ" ಎಂದಾಗ ನಂಬಿಯಣ್ಣ ನೀರಿನಿಂದ ಹೊರಬಿದ್ದ ಮೀನಿನಂತಾದನು; ನಿಜಕ್ಕೂ ಈ ದೃಶ್ಯ ಅತ್ಯಂತ ನಾಟಕೀಯವಾಗಿದ್ದು ಭಕ್ತನ ಪರಾಜಯವನ್ನೂ, ಶಿವನ ಜಯವನ್ನೂ ಪ್ರಕಟಿಸುತ್ತದೆ.

ನಂಬಿಯಣ್ಣ ಜಗ್ಗಲಿಲ್ಲ. ಮೂಲಪತ್ರವನ್ನು ನೋಡಿ ಅದನ್ನು ಧ್ವಂಸ ಮಾಡುವ ಉದ್ದೇಶವನ್ನು ಹೊಂದಿ ಮೂಲಪತ್ರ ವನ್ನು ತೋರಿಸಲು ಒತ್ತಾಯಿಸಿದನು. ವೃದ್ಧ ಮಾಹೇಶ್ವರನು ಶಿವನ ದೇವಾಲಯಕ್ಕೆ ನಂಬಿಯಣ್ಣನನ್ನು ಕರೆದುಕೊಂ ಡು ಹೋದನು. ಪಾದರಕ್ಷೆಗಳನ್ನು ತೆಗೆಯದೆ ವೃದ್ಧ ಮಾಹೇಶ್ವರನು ದೇವಾಲಯವನ್ನು ಪ್ರವೇಶಿಸಿದನು.

ನಂಬಿಯಣ್ಣ 'ಇದೇನಾಶ್ಚರ್ಯ ಎಂದುಕೊಳ್ಳುತ್ತಿರುವಾಗ ಗರ್ಭಗುಡಿಯನ್ನು ವೃದ್ಧ ಮಾಹೇಶ್ವರ ಪ್ರವೇಶಿಸಿ ಲಿಂಗದೊ ಳಗೆ ಅಂತರ್ಧಾನನಾದನು. ಆ ಹೊತ್ತಿಗೆ ನಂಬಿಯಣ್ಣನಿಗೆ ತನ್ನ ಮೂಲ ಸ್ವರೂಪದ ಸ್ಮರಣೆ ಉಂಟಾಯಿತು. ಅದು ವರೆಗೆ ತಾನು ಶಿವನ ಆರಾಧನೆ ಮಾಡದೆ ಸುಖ ಜೀವನ ನಡೆಸಿದುದಕ್ಕಾಗಿ ವ್ಯಥೆಪಟ್ಟನು. ಆಗ ಶಿವನು ಸಕಲ ದೇವತೆಗಳೊಡನೆ, ಗಣಧರರೊಡನೆ ತನ್ನ ಸ್ವಸ್ವರೂಪದಿಂದ ಶಾಂತಾರ್ಕಕೋಟಿತೇಜದಿಂದ ವಿರಾಜಿಸಿದನು.

ನಂಬಿಯಣ್ಣನು ಶಿವನ ದರ್ಶನದಿಂದ ಕೃತಕೃತ್ಯನಾದನು. ಶಿವನಾಜ್ಞೆಯಂತೆ ಶಿವನನ್ನು "ಪಿಚ್ಚನೆ, ಶಶಿಧರನೆ, ಪಶು ಪತಿಯೆ ಎಂದು ಹಾಡಿ ಕುಣಿದನು. ನಂಬಿಯು ತಾನು ಶಿವನನ್ನು ಗುರುತಿಸಲಾರದೆ ಹೋದುದಕ್ಕಾಗಿ ವ್ಯಥೆಪಟ್ಟನು.

ಶಿವನೇ ತನ್ನನ್ನು ಆಳನ್ನಾಗಿ ಮಾಡಿಕೊಳ್ಳಬೇಕೆಂದು ನಿಶ್ಚಯಿಸಿದ ಮೇಲೆ ತಾನು ಅವನ ಶರಣನಾಗದಿರಲು ಸಾ ಧ್ಯವಿಲ್ಲವೆಂದನು. ಶಿವನು ಎಲ್ಲೆಲ್ಲಿ ಶಿವದೇವಾಲಯಗಳಿರುವುದೋ ಅಲ್ಲಿ ಸಹಸ್ರ ಸಹಸ್ರ ಹೊನ್ನುಗಳನ್ನು ಕೊಡುವು ದಾಗಿ ಹೇಳಿ ನಂಬಿಯಣ್ಣನಿಗೆ ಆ ಶಿವದೇವಾಲಯದಿಂದ ಹೊನ್ನಿನ ರಾಶಿಯನ್ನು ಕೊಟ್ಟು ಸಾವಿರ ಕಾಲ ರಾಜ್ಯಭಾ ರ ಮಾಡಿ ಸುಖವಾಗಿರು ಎಂದು ಹರಸಿ ಅಂತರ್ಧಾನನಾದನು. ನಂಬಿಯ ಆತಂಕವೆಲ್ಲ ಕಳೆದು

ಮನಸ್ಸು ಹಾ ಗೂ ಅವನ ಜೀವನ ಬೆಳಗಿತು. ಹೀಗೆ ವೃದ್ಧ ಮಾಹೇಶ್ವರನ ರೂಪದಿಂದ ಆಗಮಿಸಿದ ಶಿವನು ತನ್ನ ಲೀಲೆಯನ್ನು ಪ್ರಕಟಿಸಿದನು. ತಿರುವಣ್ಣಲ್ಲೂರಿಗೆ ತೆರೆಳಿದ ನಂಬಿಯಣ್ಣ ತನ್ನ ಚಿಂತೆಯ ಗ್ರಹಣದಿಂದ ಬಿಡುಗಡೆಯನ್ನು ಪಡೆದನು.

ಶಿವನು ತನ್ನ ನಟನೆಯಲ್ಲಿ ಯಾವ ಸಂದರ್ಭದಲ್ಲಿಯೂ ಸೋಲಲಿಲ್ಲ.